# ಬೆಟ್ಟಕ್ಕಂಟಿದ ಮೊಬೈಲು, ಬಯಲಿಗಂಟದ ನಂಬರು



ಚೈತ್ರಾ ಕೋಟೂರ್

ಅದೊಂದು ಬೆಟ್ಟವಿತ್ತಂತೆ! ಅದನ್ನು ಒಬ್ಬರೇ ಹತ್ತಬೇಕಂತೆ! ಆ ಬೆಟ್ಟವನ್ನು ಹತ್ತುತ್ತಾ ಹೋದಂತೆ ಅವರ ಎಲ್ಲಾ ನೆನಪುಗಳು ನಿಧಾನವಾಗಿ ಅಳಿಸುತ್ತಾ ಹೋಗುತ್ತವೆಯಂತೆ! ಅದರಲ್ಲೂ ಮನುಷ್ಯರಿಗೆ ಸಂಭಂದಿಸಿದ ನೆನಪುಗಳು! ಯಾರು? ಏನು? ಎತ್ತ? ಹೆಸರು? ಸಂಬಂಧ! ಇತ್ಯಾದಿ ಎಲ್ಲವೂ ಎಲ್ಲವೂ ಹಾಗೇ ಅಳಿಸುತ್ತಾ ಹೋಗುತ್ತವೆಯಂತೆ! ಆ ಬೆಟ್ಟವನ್ನು ಹತ್ತ ಬಯಸುವವರಿಗೆ ಒಂದು ವರವೋ ಅಥವಾ ಮೀಸಲಾತಿಯೋ ಎಂಬಂತೆ, ಒಂದು ಮೊಬೈಲ್ ಫೋನ್ ಕೊಡಲಾಗುತ್ತದಂತೆ! ಅದು ಇದುವರೆಗೂ ಇವರು ಬಳಸುತ್ತಿದ್ದ ಅಥವಾ ಇವರ ಬಳಿಯಿದ್ದ ಫೋನಲ್ಲ; ಆದರೆ ಅವರ ದೂರವಾಣಿ ಸಂಖ್ಯೆಯನ್ನೇ ಹೊಂದಿದ ಇನ್ನೊಂದು ಹೊಸ ಫೋನ್. ಅದರಲ್ಲಿ ಇವರಿಗೆ ಸಂಬಂಧಿಸಿದ ಯಾವುದೇ ಸಂಪರ್ಕ ಸಂಖ್ಯೆಗಳೂ ಇರುವುದಿಲ್ಲವಂತೆ!

ಹೀಗೆ ಒಬ್ಬ ಮಹಾಶಯ ದಿಟ್ಟವಾಗಿ ನಿರ್ಧರಿಸಿ ಆ ಬೆಟ್ಟವನ್ನು ಹತ್ತಲು ಶುರುಮಾಡಿದ್ದ. ಅವನು ಹತ್ತು ಹೆಜ್ಜೆ ಇಡುವಷ್ಟರಲ್ಲಿಯೇ ವಿಕಾರವಾಗಿ ಕಿರುಚುತ್ತಾ, ಕೂದಲು ಕೆದರಿದ್ದ, ಬೆತ್ತಲಾಗಿದ್ದ, ಹೆಂಗಸೊಬ್ಬಳು ಉರುಳು ಉರುಳುತ್ತಾ ಕೆಳಗೆ ಬರುತ್ತಿದ್ದದ್ದನ್ನು ಕಂಡವನೇ ಬೆಚ್ಚಿ ಬಿದ್ದ! ಅವಳು ತನ್ನ ಬಳಿ ಇದ್ದ ಏಕೈಕ ವಸ್ತು, ಅವಳ ಕುತ್ತಿಗೆಗೆ ನೇತು ಹಾಕಿಕೊಂಡಿದ್ದ ಮೊಬೈಲನ್ನು ತೋರಿಸುತ್ತಾ, ‘‘ಯಾರೇ ನಿಮಗೆ ಫೋನ್ ಮಾಡಿದರೂ, ಅವರ ಕುರಿತಾಗಿ ಸೇವ್ ಮಾಡಿಕೊಳ್ಳಿ! ಅದರ್‌ವೈಸ್ ಯೂ ಲಾಸ್ಟ್ ಎವ್ರಿಥಿಂಗ್!!!’’ ಎಂದು ಪದೇ ಪದೇ ಅದನ್ನೇ ಕೂಗುತ್ತಾ ಕೆಳಗೆ ಉರುಳಿ ಬಿಡುತ್ತಾಳೆ. ‘‘ಪಯಣದ ಅರ್ಧದಲ್ಲಿ ಏನೇನೊ ಅನಿಸಿ, ಎಷ್ಟೋ ಜನ ಮರಳಿ ಉರುಳಿ ಬಂದುಬಿಡುತ್ತಾರೆ. ಅವರು ಹಾಗೆ ಬಂದ ನಂತರ ಇನ್ನಷ್ಟು ಸಂಕಷ್ಟವನ್ನು ಅನುಭವಿಸುತ್ತಾರೆ! ನೀವು ಹಾಗೇ ಮಾಡಬೇಡಿ! ಅಂತ್ಯದಲ್ಲಿ ಅನಂತ ಸಂಸಾರದ ಆದಿ ಸಿಗುತ್ತದೆ. ಏನಾದರೂ ಆಗಲಿ,